# ಶ್! ಇದು ವಿಷಕಾರಿ ಉದ್ಯಾನ...

**ಇಂಗ್ಲೆಂಡ್‌ನಲ್ಲಿನ ಈ ಉದ್ಯಾನದಲ್ಲಿ ನೂರಕ್ಕೂ ಅಧಿಕ ವಿಷಯುಕ್ತ ಸಸ್ಯಗಳಿದ್ದು, 'ಪಾಯ್ಸನ್ ಗಾರ್ಡನ್' ಎಂದೇ ಕರೆಸಿಕೊಂಡಿದೆ.**



**■ ರಮಣ್ ಶೆಟ್ಟಿ ರೆಂಜಾಳ್**

'ಉದ್ಯಾನ' ಪ್ರಕೃತಿ ಸೌಂದರ್ಯದ ಪ್ರತಿಬಿಂಬ. ಆದರೆ ಇಂಗ್ಲೆಂಡ್‌ನ ಈ ಉದ್ಯಾನ, ಸೌಂದರ್ಯದೊಂದಿಗೆ ಅಪಾಯವನ್ನೂ ಅಡಗಿಸಿಟ್ಟುಕೊಂಡಿದೆ. ಇಲ್ಲಿನ ನಾರ್ತಂಬರ್‌ಲ್ಯಾಂಡ್‌ನಲ್ಲಿರುವ ಪ್ರಸಿದ್ಧ 'ಅಲ್ನ್‌ವಿಕ್ ಗಾರ್ಡನ್', ವಿಶ್ವದಲ್ಲೇ ಅತ್ಯಂತ ವಿಷಕಾರಿಯೆನ್ನಲಾದ ಉದ್ಯಾನವನವನ್ನು ತನ್ನೊಳಗೆ ಪೋಷಿಸುತ್ತಿದೆ.

ಅಲ್ನ್‌ವಿಕ್ ನಗರದ ಅಲ್ನ್‌ವಿಕ್ ಕ್ಯಾಸೆಲ್‌ಗೆ ಹೊಂದಿಕೊಂಡಿರುವ ವನಸಂಕುಲವೇ 'ಅಲ್ನ್‌ವಿಕ್ ಗಾರ್ಡನ್'. ಇದರಲ್ಲಿ ಹಲವಾರು ಜಾತಿಯ ವಿಷಕಾರಿ ವೃಕ್ಷಗಳನ್ನು ಒಳಗೊಂಡ ಪ್ರತ್ಯೇಕ ಉದ್ಯಾನವಿದ್ದು, ಉತ್ತರ ಇಂಗ್ಲೆಂಡ್‌ನ ಆಕರ್ಷಣೆಗಳಲ್ಲಿ ಒಂದೆನಿಸಿಕೊಂಡಿದೆ. ಸುಮಾರು 14 ಎಕರೆಗಳ ವಿಸ್ತೀರ್ಣದಲ್ಲಿ ಹಬ್ಬಿಕೊಂಡಿರುವ ಇಲ್ಲಿನ ಸಸ್ಯಸಂಕುಲ ನೋಡಲು ವಿಶ್ವದೆಲ್ಲೆಡೆಯಿಂದ ಪ್ರವಾಸಿಗರು ಬರುತ್ತಾರೆ.

ಸುವಾಸನೆಯುಕ್ತ ಸಾಲು ಸಾಲು ಗುಲಾಬಿಗಳು, ಆಲಂಕಾರಿಕ ಸಸ್ಯಗಳು, ಸರಣಿ ಕಾರಂಜಿಗಳ ನಡುವೆ ವಿಹರಿಸುತ್ತಾ ಒಂದಿಷ್ಟು ಮುನ್ನಡೆದರೆ, ಕಬ್ಬಿಣದ ಗೇಟೊಂದು ಎದುರಾಗುತ್ತದೆ. 'ದಿ ಪಾಯ್ಸನ್ ಗಾರ್ಡನ್' ಎಂಬ ನಾಮಫಲಕ ಒಂದರೆಗಳಿಗೆ ತಡೆದು ನಿಲ್ಲಿಸುತ್ತದೆ. ಸುಮಾರು ನೂರಕ್ಕೂ ಅಧಿಕ ವಿಷಯುಕ್ತ ಹಾಗೂ ಮಾದಕ ಔಷಧಯುಕ್ತ ಸಸ್ಯಗಳನ್ನು ಹೊಂದಿರುವ ಈ ಉದ್ಯಾನ 'ವಿಷಕಾರಿ ಉದ್ಯಾನ' ಎಂದೇ ಪ್ರಸಿದ್ಧಿ.

'ಇಲ್ಲಿ ನಿಂತು ಹೂಗಳ ವಾಸನೆಯನ್ನು ಆಘ್ರಾಣಿಸಬಾರದು' ಎನ್ನುವ ಸೂಚನೆ ಗಮನ ಸೆಳೆಯುತ್ತದೆ. ಕೆಲವು ಗಿಡಗಳ ಮುಂದೆ, 'ಈ ಗಿಡ ನಿಮ್ಮನ್ನು ಸಾಯಿಸಬಹುದು' ಎಂಬ ಎಚ್ಚರಿಕೆ ಸಂದೇಶ ಬರೆಯಲಾಗಿದೆ. ಈ ಸಂದೇಶವನ್ನು ಲಘುವಾಗಿ ಪರಿಗಣಿಸಿದರೆ ಪ್ರಾಣಕ್ಕೆ ಕುತ್ತು ಗ್ಯಾರಂಟಿ. ಇಲ್ಲಿನ ಗಿಡಗಳು ಹಾಗೂ ಹೂವುಗಳು ಹಾವಿನಷ್ಟೇ ವಿಷಕಾರಿಯಾಗಿದ್ದು, ಇಲ್ಲಿಗೆ ಬರುವ ಪ್ರವಾಸಿಗರು ಗಿಡಗಳು, ಹೂವು, ಹಣ್ಣುಗಳನ್ನು ಸ್ಪರ್ಶಿಸುವುದು, ವಾಸನೆ ನೋಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಅಪರೂಪಕ್ಕೊಮ್ಮೆ ಈ ಉದ್ಯಾನದೊಳಗೆ ವಿಹರಿಸುವಾಗ ಕೆಲವು ಪ್ರವಾಸಿಗರು ಈ ವಿಷಕಾರಿ ಗಿಡಗಳು ಸೂಸುವ ಗಾಳಿಗೇ ತಲೆಸುತ್ತಿ ಬಿದ್ದಿರುವ



ನಿದರ್ಶನಗಳಿವೆ. ಹೀಗಾಗಿ ಸೂಕ್ತ ಗೈಡುಗಳ ಜೊತೆಯೇ ಈ ತೋಟದಲ್ಲಿ ವಿಹರಿಸಬೇಕು.

ಆಂಗ್ಲರ ತೋಟಗಳಲ್ಲಿ ಸರ್ವತ್ರವಾಗಿರುವ 'ಲಾರೆಲ್ ಹೆಡ್ಜ್' ಎನ್ನುವ ಒಂದು ಸಾಮಾನ್ಯ ಜಾತಿಯ ಸಸ್ಯ ವಿಷಕಾರಿ ವಾಯುವನ್ನು ಸೂಸುತ್ತದೆ ಎನ್ನಲಾಗಿದೆ. ಇಲ್ಲಿರುವ ವಿವಿಧ ಪ್ರಬೇಧಗಳ ಸಸ್ಯಗಳ ಪೈಕಿ ದಕ್ಷಿಣ ಅಮೆರಿಕ ಮೂಲದ ಬ್ರಗ್‌ಮ್ಯಾನ್ಸಿಯಾ ಎಂಬ ಸಸ್ಯ ಅತ್ಯಂತ ವಿಶಿಷ್ಟವಾಗಿದ್ದು, ಗಿಡದ ವಿಷವು, ಇದನ್ನು ಸೇವಿಸಿದ ವ್ಯಕ್ತಿಯನ್ನು ಕೊಲ್ಲುವ ಮೊದಲು ಕಾಮೋತ್ತೇಜನಗೊಳಿಸುವುದೆಂದು ಹೇಳುತ್ತಾರೆ. ಹಾಗೆಂದೇ ವಿಕ್ಟೋರಿಯಾದ ಮಹಿಳೆಯರು ತಮ್ಮ ಕೊನೆಯ ಪಯಣದ ಮೊದಲು ಚಹಾದಲ್ಲಿ ಇದರ ಪರಾಗ ಬೆರೆಸಿ ಸೇವಿಸಿ ಸುಖ ಮರಣವನ್ನಪ್ಪುತ್ತಿದ್ದರೆಂಬ ದಂತಕಥೆಯಿದೆ.

ಇತಿಹಾಸದ ಪ್ರಕಾರ, 1750ರಲ್ಲಿ ನಾರ್ತಂಬರ್‌ಲ್ಯಾಂಡ್‌ನ ಪ್ರಥಮ ಡ್ಯೂಕ್ ಈ ಉದ್ಯಾನ ಸ್ಥಾಪಿಸಿದಾತ. ಸಸ್ಯ ಸಂಗ್ರಹದಲ್ಲಿ ಭಾರೀ ಉತ್ಸುಕನಾಗಿದ್ದ ಮೂರನೇ ಡ್ಯೂಕ್, ವಿಶ್ವದಾದ್ಯಂತ ವಿವಿಧ ರೀತಿಯ ಸಸ್ಯಗಳನ್ನು ಇಲ್ಲಿಗೆ ತಂದುನೆಟ್ಟಿರುವುದೆಂಬ ಮಾಹಿತಿಯನ್ನು ಉದ್ಯಾನ ಮಾಲೀಕರಾದ ಡಚೆಸ್ ಜೇನ್ ಪರ್ಸಿ ನೀಡುತ್ತಾರೆ.

19ನೇ ಶತಮಾನದ ನಡುವಿನಲ್ಲಿ ನಾಲ್ಕನೇ ಡ್ಯೂಕ್ ಇಟಾಲಿಯನ್ ಗಾರ್ಡನ್ ಆರಂಭಿಸಿದ್ದ. ಆ ಶತಮಾನದ ಉತ್ತರಾರ್ಧದಲ್ಲಿ ಇದು ಭವ್ಯ ಉದ್ಯಾನವಾಗಿ ರೂಪಗೊಂಡರೂ, 2ನೇ ವಿಶ್ವ ಯುದ್ಧದ 'ಡಿಗ್ ಫಾರ್ ವಿಕ್ಟರಿ' ಅಭಿಯಾನದ ಸಮಯ, ಇದು ಆಹಾರ ಒದಗಿಸುವ ತಾಣವಾಗಿ ರೂಪಾಂತರಗೊಂಡು 1950ರಲ್ಲಿ ಸಂಪೂರ್ಣ ಮುಚ್ಚುವಂತಾಯಿತು. 1997ರಲ್ಲಿ ನಾರ್ತಂಬರ್‌ಲ್ಯಾಂಡ್‌ನ ಡಚೆಸ್ ಜೇನ್ ಪರ್ಸಿ ಮಾಂತ್ರಿಕ ಸ್ಪರ್ಶ ನೀಡಿ 42 ಮಿಲಿಯನ್ ಯೂರೋಗಳ ವೆಚ್ಚದೊಂದಿಗೆ ಉದ್ಯಾನ ಪುನಶ್ಚೇತನಗೊಳಿಸಿದರು.

ವಿಷಕಾರಿ ಉದ್ಯಾನದೊಳಗಿನ ಸಸ್ಯಗಳು ಅದೆಷ್ಟು ಸುಂದರವಾಗಿವೆಯೆಂದರೆ, ಅಪಾಯಕಾರಿಯೆಂದು ಊಹಿಸಲೂ ಸಾಧ್ಯವಿಲ್ಲ! ಎಚ್ಚರಿಕೆ ಫಲಕ ಕಾಣದಿದ್ದರೆ, ಅನುಭವಿಸಿದ ನಂತರವಷ್ಟೇ ಸತ್ಯ ದರ್ಶನವಾಗುವುದು. ಅತ್ಯಂತ ಅಪಾಯಕಾರಿ ಸಸ್ಯಗಳನ್ನು ಬೃಹತ್ ಪಂಜರಗಳೊಳಗೆ ಬಂಧಿಸಿ ಬೆಳೆಸಲಾಗಿದೆ.

ಲಾರೆಲ್ ಹೆಡ್ಜ್, ಬ್ರಗ್‌ಮ್ಯಾನ್ಸಿಯಾ, ಸೋಮ್ನಿಫೆರಮ್, ಹೆಮ್ಲಾಕ್, ಫಾಕ್ಸ್ ಗ್ಲೋವ್, ಗಾಂಜಾ, ಕೋಕಾ, ಅಫೀಮು, ಕ್ಯಾಸ್ಟರ್ ಮತ್ತಿತರ ಗಿಡಗಳನ್ನಿಲ್ಲಿ ಬೆಳೆಸಲಾಗಿದೆ. ಪ್ರತಿ ವರ್ಷ 6 ಲಕ್ಷಕ್ಕೂ ಅಧಿಕ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ.

ಇಲ್ಲಿನ ಸಸ್ಯಗಳು ತಮ್ಮ ಔಷಧೀಯ ಗುಣಗಳಿಗೂ ಹೆಸರುವಾಸಿ. ವಿಷಕಾರಿ ಅಂಶಗಳಿದ್ದರೂ ಅವುಗಳ ಔಷಧೀಯ ಗುಣಗಳತ್ತ ಹೆಚ್ಚಿನ ಗಮನ ಹರಿಸಲಾಗಿದೆಯಂತೆ. ಫೆಬ್ರುವರಿ 2005ರಲ್ಲಿ ವಿಷಕಾರಿ ಸಸ್ಯಗಳ ಉದ್ಯಾನವನ್ನು ಅಲ್ನ್‌ವಿಕ್ ಗಾರ್ಡನ್‌ಗೆ ಸೇರಿಸಿದ ನಂತರ ಇಲ್ಲಿ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯೂ ಅಧಿಕವಾಗಿದೆ. ■